**O.S** 42/2010

**PW**-2

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 04.03.2023 ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ: ವಾದಿ ಪರ ವಕೀಲರಾದಃ ಶ್ರೀ **P.R** ರವರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಾನು ಕೊಟ್ಟ ಮಾಹಿತಿಯ ಮೇರೆಗೆ ವಕೀಲರು ತಯಾರಿಸಿರುತ್ತಾರೆ. ನಾನು ಅದರಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ನಂತರ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ.

**PW**1 ರವರು ಈಗಾಗಲೇ 13 ದಾಖಲಾತಿಗಳನ್ನು ನಿಪಿ–1 ರಿಂದ 13 ರಂತೆ ಗುರುತು ಮಾಡಿಸಿರುತ್ತಾರೆ, ಅದನ್ನೆ ನನ್ನ ದಾಖಲಾತಿಯ ಸಾಕ್ಷ್ಯಗಳು ಎಂದು ಪರಿಗಣಿಸಲು ನ್ಯಾಯಾಲಯದ ಮುಂದೆ ಪಾರ್ಥಿಸಿಕೊಳ್ಳುತ್ತೇನೆ.

ನನ್ನ ತಂದೆಯ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆ, ಟಿ. ನರಸೀಪುರ ಇಲ್ಲಿಯ ಶಾಲಾ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ–14 ಎಂದು ಗುರುತಿಸಲಾಯಿತು.

ನನ್ನ ತಂದೆಯ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ, ಸುತ್ತೂರು ಇಲ್ಲಿಯ ಶಾಲಾ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ–15 ಎಂದು ಗುರುತಿಸಲಾಯಿತು.

ದಿನಾಂಕ 21.05.1952 ರ ದಾನ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ– 16 ಎಂದು ಗುರುತಿಸಲಾಯಿತು.

ನನ್ನ ತಂದೆ ತಾಯಿಯ ಲಘ್ನ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ– 17 ಎಂದು ಗುರುತಿಸಲಾಯಿತು.

ನನ್ನ ತಂದೆಯ ಆಧಾರ್ ಕಾರ್ಡನ್ನು ಹಾಜರು ಮಾಡಿರುತ್ತೇನೆ, ಅದನ್ನು ನಿಪಿ–18 ಎಂದು ಗುರುತಿಸಲಾಯಿತು. ಸಾಕ್ಷಿಯ ತಂದೆಗೆ ದಿನನಿತ್ಯ ಬದುಕಿಗೆ ನಿಪಿ–18 ರ ಅವಶ್ಯಕತೆ ಇರುವ ಕಾರಣ ಹಾಜರುಪಡಿಸಿರುವ ಅದರ ದೃಢೀಕೃತ ನಕಲನ್ನು ನಿಪಿ–18 ಕ್ಕೆ ತುಲನೆ ಮಾಡಿ ನೋಡಿ ಸರಿ ಬಂದ ಕಾರಣ ದೃಢೀಕೃತ ನಕಲನ್ನು ನಿಪಿ–18(ಎ) ಎಂದು ಗುರುತಿಸಿ ನಿಪಿ–18 ನ್ನು ಸಾಕ್ಷಿಗೆ ಮರಳಿ ನೀಡಲಾಯಿತು.

ನಮ್ಮ ಕುಟುಂಬದ ಪಡಿತರ ಚೀಟಿಯನ್ನು ಹಾಜರು ಮಾಡಿರುತ್ತೇನೆ, ಅದನ್ನು ನಿಪಿ–19 ಎಂದು ಗುರುತಿಸಲಾಯಿತು. ಸಾಕ್ಷಿ ಹಾಗೂ ಅವರ ಮನೆಯವರ ದಿನನಿತ್ಯ ಬದುಕಿಗೆ ನಿಪಿ–19 ರ ಅವಶ್ಯಕತೆ ಇರುವ ಕಾರಣ ಹಾಜರುಪಡಿಸಿರುವ ಅದರ ದೃಢೀಕೃತ ನಕಲನ್ನು ನಿಪಿ–19 ಕ್ಕೆ ತುಲನೆ ಮಾಡಿ ನೋಡಿ ಸರಿ ಬಂದ ಕಾರಣ ದೃಢೀಕೃತ ನಕಲನ್ನು ನಿಪಿ–19(ಎ) ಎಂದು ಗುರುತಿಸಿ ನಿಪಿ–19 ನ್ನು ಸಾಕ್ಷಿಗೆ ಮರಳಿ ನೀಡಲಾಯಿತು.

ನನ್ನ ತಂದೆಯು ಅಂದರೆ ವಾದಿಯು ನನಗೆ ನೀಡಿರುವ ಸಾಮಾನ್ಯ ಅಧಿಕಾರ ಪತ್ರವನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ–20 ಎಂದು ಗುರುತಿಸಲಾಯಿತು.

(ಈ ಹಂತರದಲ್ಲಿ ವಾದಿ ಪರ ವಕೀಲರು ಮುಂದಿನ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಆಲಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

04.03.2023.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.